(iii) *re* : Appointing a High power Committee to go into Causes. etc. for fall of standard of students.

Sri T, R. SHAMANNA Fort.—I beg to move :

"That this Assembly recocmmend to Government to appoint a High Power Committee to examine the eauses of fall in the Standard of Education of students and to suggest ways and means to improve it."

Mr. DEPUTY SPEAKER.—Resolutson moved :

"I, That this Assembly recommends to Government to appoint a High Power Committee to examine the causes of fall in the Standard of Education of Students and to suggest ways and means to improve it."

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಸಭಾಪತಿಗಳೆ, ಈ ನಮ್ಮ ರಾಜ್ಯಸರ್ಕಾರದವರು ಈ ವಿದ್ಯಾಭ್ಯಾಸಕ್ಕಾಗಿ ಸುಮಾರು 67 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಬೇರೆ ಯಾವು ದಕ್ಕೂ ಇಷ್ಟು ಹೆಚ್ಚು ಹಣ ಖರ್ಚ ಮಾಡುತ್ತಾ ಇಲ್ಲ. ಇವತ್ತು ಇದರಿಂದ ಸರ್ಕಾರದವರು ಸರಿ ಯಾದಂತಹ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಒದಗಿಸಿದರೆ ಇದ್ದಕಿಂತ ದೊಡ್ಡ ಕೆಲಸ ಬೇರೆ ಯಾವುದೂ ಇಲ್ಲ. ವಿದ್ಯಾಭ್ಯಾಸ ಎಂಬುದು ಒಂದು ರಾಷ್ಟ್ರದ ಆಸ್ತೀ ರಾಷ್ಟ್ರದ ಆಸ್ತಿಯನ್ನು ವ್ಯದ್ಧಿಪಡಿಸುವ ಬಗ್ಗೆ ರಾಜ್ಯಸರ್ಕಾರದವರು ಸಾಕಷ್ಟು ಕಾತುರರಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನಾ ಕಾರಣಗಳಿಂದ ನಾವು ಖರ್ಚು ಮಾಡುತ್ತಿರತಕ್ಕಂತಹ ಹಣ ಸರಿಯಾದ ರೀತಿಯಲ್ಲಿ ಖರ್ಚಾಗದೆ ವ್ಯಯವಾಗುತ್ತದೆ. ಅದೇ ರೀತಿ ವಿದ್ಯಾಮಟ್ಟ ಮತ್ತು ಅದರಿಂದ ಆಗತಕ್ಕ ಪ್ರಯೋಜನ ಸಾಕಷ್ಟು ಆಗದೆ ಕಡಿಮೆಯಾಗುತ್ತಾ ಇರುವುದು ಶೋಚನೀಯವಾದ ವಿಚಾರ. ಆದ್ದರಿಂದ ರಾಷ್ಟ್ರ ಆಸ್ತಿಯ ಬದಲಾಗಿ ನಾವು ನ್ಯಾಷನಲ್ ವೇಸ್ಟ್ ಮಾಡುತ್ತಿದ್ದೇವೆಂದರೆ ತಪ್ಪಾಗಲಾರದು. ಈಗ ನಮ್ಮ ರಾಜ್ಯದಲ್ಲಿ ಹೆಚ್ಚು ಹಣವನ್ನು ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದೇವೆ. ಆದರೆ ಹೆಚ್ಚು ಟೆಕ್ನಿಕಲ್ ಎಜುಕೇಷನ್ ತೆಗೆದುಕೊಂಡವರು ನಿರುದ್ಯೋಗಿಗಳಾಗಿದ್ದಾರೆ. ಈಗ ಮೆಡಿಕರ್ ಎಜುಕೇಷನ್ ಬಗ್ಗೆ ಸಹ ಉತ್ತಮವಾದ ಬದಲಾವಣೆ ಮಾಡಬೇಕೆಂದು ಮಾನ್ಯ ಮಂತ್ರಿ ಯವರು ಹೇಳುತ್ತಿದ್ದಾರೆ. ಅದು ಆಗುವುದು ಬಹಳ ಮುಖ್ಯ. ಎಲ್ಲಕಿಂತಲೂ ಹೆಚ್ಚಾಗಿ ನಮ್ಮ ಪ್ರೈಮರಿ ಎಜುಕೇಶನ್ ಬಗ್ಗೆ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ. ನಾನು ಜೈಪ್‌ರ್ಸ್ಟಿಟಿಂಗ್ ಮತ್ತು ಶಾರ್ಟ್ ಹ್ಯಾಂಡ್ ಹೇಳಿಕೊಡತಕ್ಕಂತಹ ಮೇಷ್ಟ್ರು ಆಗಿರುವುದರಿಂದ ಇವತ್ತು ಒಬ್ಬೊಬ್ಬ ವಿದ್ಯಾರ್ಥಿ ಎಷ್ಟು ತಪ್ಪು ಮಾಡುತ್ತಿದ್ದಾನೆ ಎಂದು ಕಂಡುಹಿಡಿಯಬಹುದು. ಹಿಂದೆ ಜೈಪ್ ಮಾಡಿ ದ್ದರಲ್ಲಿ ಎಷ್ಟು ತಪ್ಪು ಇದೆ ಎಂದು ಕಂಡುಹಿಡಿಯಬೇಕಾಗಿತ್ತು. ಅದರೆ ಈಗ ಜೈಪ್‌ಮಾಡಿದ್ದರಲ್ಲಿ ಎಷ್ಟು ಸರಿಯಾದ ಪದಗಳು ಇವೆ ಎಂದು ಹುಡುಕಬೇಕಾಗಿದೆ. ಆದ್ದರಿಂದ ಪ್ರತಿಯೊಂದು ಮಟ್ಟ ದಲ್ಲಿ ಕೂಡ ವಿದ್ಯಾಭ್ಯಾಸದ ಮಟ್ಟ ಸರಿಯಾದ ರೀತಿಯಲ್ಲಿ ಹೋಗುತ್ತಾ ಇಲ್ಲ. ಇದಕ್ಕೆ ಕಾರಣ ವೇನೆಂದರೆ ನಮ್ಮ ದೇಶದಲ್ಲಿ ಪ್ರಯೋಗಗಳೇ ಹೆಚ್ಚಾಗಿವೆ. ಆದರೆ ಅದರ ಪ್ರತಿಫಲ ಸರಿಯಾಗಿ ದೊರೆಯುತ್ತಾ ಇಲ್ಲ. ನಮ್ಮಲ್ಲಿ ಒಂದು ಸಲ ಮಲ್ಟಿ ಪರ್ಪಸ್ ಸ್ಕೀಂ ಮಾಡಿದರು ; ಒಂದು ಸಲ ಪಿ.ಯು.ಸಿ. ಎರಡು ವರ್ಷ ಮಾಡಿದರು. ನಮ್ಮಲ್ಲಿ ಒಂದು ಕ್ರಮವಾದ ಪದ್ಧತಿಯನ್ನು ಅನುಸರಿಸಿ ಒಂದು ಸರಿಯಾದ ನೀತಿ ಹಾಕಿಕೊಳ್ಳದಿರುವುದರಿಂದ, ಸರಿಯಾದ ವಿದ್ಯೆ ಸಂಪಾದನೆ ಮಾಡುವುದಕ್ಕೆ ಸಾಕಷ್ಟು ಅನುಕೂಲವಾಗುತ್ತಾ ಇಲ್ಲ.

Mr. DEPUTY SPEAKER.—Sri Shamanna may continue on the next nonofficial day.

ಶ್ರೀ ಕೋಣಂದೂರು ಲಿಂಗಪ್ಪ.—ಸಭೆ ಏಳುವುದಕ್ಕೆ ಮುಂಚೆ ಸರ್ಕಾರದಲ್ಲಿ ಒಂದು ವಿನಂತಿ. ಈಗ ಲೋಕರ್ ಕ್ಯಾಂಡಿಡೇಟ್ಸ್ ಆಗಿರುವ ಕಾಲೇಜು ಟೀಚರುಗಳನ್ನು 31ನೇ ಮಾರ್ಚ್‌ಯವರೆಗೆ ಮುಂದು ವರಿಸಿದ್ದಾರೆ. ಅದು ಇವತ್ತಿಗೆ ಮುಕ್ತಾಯವಾಯಿತು. ಅದರ ಬಗ್ಗೆ ಮಂತ್ರಿಯವರು ಒಂದು ಆಶ್ವಾಸನೆಯನ್ನು ಕೊಡಬೇಕು. ಇಲ್ಲದಿದ್ದರೆ ಅವರಿಗೆ ನಾಳೆಯಿಂದ ಕೆಲಸ ಇಲ್ಲದ ಹಾಗೆ ಆಗುತ್ತದೆ.

† ಶ್ರೀ ಎ. ಆರ್. ಬದರೀನಾರಾಯಣ್ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಲೋಕಲ್ ಕ್ಯಾಂಡಿಡೇಟ್ಸ್ ವಿಚಾರವಾಗಿ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಹಿಂದೆ ಏಪ್ರಿಲ್ 10ರವರೆಗೆ ಆಕಾಡಮಿಕ್ ಇಯರ್‌ನಲ್ಲಿ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಅವಧಿ ಕೊಟ್ಟಿತ್ತು. ಅವರಿಂದ ರೆಪ್ರಸೆಂಟೇಷನ್ ಬಂತು. ಅವರಿಗೆ ಸಂಬಳವನ್ನು ಕೊಡುತ್ತಿದ್ದಾರೆ. ಏಪ್ರಿಲ್ ಅಂತ್ಯದವರೆಗೆ ಅವರಿಗೆ ಜೀವದಾನಮಾಡುವಂತೆ ಕೇಳಿದ್ದಾರೆ. ಆದನ್ನು ಅಲ್ಲಿಯವರೆಗೂ ಮುಂದುವರಿಸಿದ್ದೇವೆ.

Mr. DEPUTY SPEAKER.—The House will nuw adjourn and meet again on Monday, the 9th April 1973 at 1 P. M.

The House adjourned at Five Minutes past Gne of the Clock to meet again at One of the Clock on Monday the 9th, April 1973.